# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:05.12.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.17 (ಜೆ ಪಿ ಪಾರ್ಕ್) ರಲ್ಲಿ ಶ್ರೀ. ಎ. ಬಿ. ದೊಡ್ಡಯ್ಯ, (ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಗಳು

**ಹಾಜರಿದ್ದವರು:-**

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಿದ್ದರು |
|---|---|---|---|
| 1 | ಶ್ರೀ ಎ. ಬಿ. ದೊಡ್ಡಯ್ಯ | ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು |
| 2 | ಶ್ರೀ ಅಜಗಣ್ಣಯ್ಯ ಸ್ವಾಮಿ | ಸಹಾಯಕ ಅಭಿಯಂತರರು | ಹಾಜರಿದ್ದರು |
| 3 | ಡಾ॥ ಚೇತನ್ | ವೈದ್ಯಾಧಿಕಾರಿಗಳು | ಹಾಜರಿದ್ದರು |
| 4 | ಶ್ರೀ ಸೋಮಶೇಖರ್ ಎಸ್. | ಕಿ. ಆ. ಪ. | ಹಾಜರಿದ್ದರು |
| 5 | ಶ್ರೀ ರಂಗರಾಜು | ಬೆಸ್ಕಾಂ | ಹಾಜರಿದ್ದರು |
| 6 | ಶ್ರೀ ಆಶೀರ್ವಾದ | 17/ಬಿ. ಮೇಲ್ವಿಚಾರಕರು | ಹಾಜರಿದ್ದರು |
| 7 | ಶ್ರೀ ಎಂ. ಸಿ. ವಿಲ್ಸನ್ | ಮೇಲ್ವಿಚಾರಕರು | ಹಾಜರಿದ್ದರು |
| 8 | ಶ್ರೀ ವೆಂಕಟೇಶ್ | ಮೇಲ್ವಿಚಾರಕರು | ಹಾಜರಿದ್ದರು |
| 9 | ಬಸವರಾಜು | ವಾರ್ಡ್-17/ಸಿ ಮೇಲ್ವಿಚಾರಕರು | ಹಾಜರಿದ್ದರು |
| 10 | ಶ್ರೀ ಮುರಳಿ | ಮೇಲ್ವಿಚಾರಕರು | ಹಾಜರಿದ್ದರು |
| 11 | ನಾಗೇಗೌಡ | ಮೇಲ್ವಿಚಾರಕರು | ಹಾಜರಿದ್ದರು |
| 12 | ಅಲಿಸ್ಟರ್ | ಮೇಲ್ವಿಚಾರಕರು | ಹಾಜರಿದ್ದರು |
| 13 | ಅಭಿಷೇಕ್ | ಮಾರ್ಷಲ್ | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**1) ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಶೌಚಾಲಯಗಳ ಬಗ್ಗೆ:-**

ಪ್ರಸ್ತಾಪಿತ ವಿಷಯದ ಬಗ್ಗೆ ವಾರ್ಡ್ ಸಹಾಯಕ ಅಭಿಯಂತರರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಒಳಪಡುವ ಎಲ್ಲಾ ಪ್ರದೇಶಗಳಲ್ಲಿ ಸರ್ವೆ ಕಾರ್ಯ ಕೈಗೊಂಡು, ಸಾರ್ವಜನಿಕರ ಅಭಿಪ್ರಾಯ ಪಡೆದು, ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಬಗ್ಗೆ ಪರಿವೀಕ್ಷಣೆ ಮಾಡಿ, ಅಗತ್ಯವಿದ್ದಲ್ಲಿ ಹೊಸ ಶೌಚಾಲಯಗಳನ್ನು ನಿರ್ಮಿಸಿಕೊಡುವ ಬಗ್ಗೆ ಮತ್ತು ದುರಸ್ತಿಗೊಂಡಿರುವ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಹಾಗೂ ಅಗತ್ಯವಿರುವ ಸ್ಥಳಗಳಲ್ಲಿ ಹೊಸ ಪಾದಚಾರಿ ಮಾರ್ಗಗಳನ್ನು ನಿರ್ಮಿಸುವ ಬಗ್ಗೆ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಲಾಗುವುದು ಎಂದು ಅಧ್ಯಕ್ಷರ ಅವಗಾಹನೆಗೆ ಮಂಡಿಸಿದರು.

Scanned with CamScanner

2) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-

- ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಯಂ ಪ್ರೇರಿತರಾಗಿ ರೋಗ ಲಕ್ಷಣಗಳಿರುವ ಸಾರ್ವಜನಿಕರಿಗೆ ಸುಮಾರು 280 ರಿಂದ 300 ಜನರಿಗೆ ಪ್ರತಿದಿನ ಕೋವಿಡ್ ಪರೀಕ್ಷೆ ನಡೆಸುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು.

ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನಜಾಗೃತಿ ಮೂಡಿಸಲು ಧ್ವನಿವರ್ಧಕವಿರುವ ಆಟೋಗಳಲ್ಲಿ ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಜೊತೆಗೆ ಬೀದಿ ಬೀದಿಗಳಲ್ಲಿ ತಳ್ಳುವ ಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸಭೆಯಲ್ಲಿ ಚರ್ಚಿಸಲಾಯಿತು.

3. ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ:-

12ನೇ ಮುಖ್ಯರಸ್ತೆ. ಗೋಕುಲ. ಹೆಚ್ಎಂಟಿ ಬಡಾವಣೆ ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು. ನೀರಿನ ಅಭಾವ ತಲೆದೋರಿರುತ್ತದೆ. ಸಂಬಂಧಪಟ್ಟ ಅಭಿಯಂತರರು. ಕೂಡಲೇ ಸ್ಥಳ ಪರಿಶೀಲನೆ ಮಾಡಿ. ಸೂಕ್ತ ಕ್ರಮಕೈಗೊಳ್ಳಬೇಕೆಂದು ಅಧ್ಯಕ್ಷರು ಸೂಚಿಸಿದರು.

4. ಸಂಚಾರ ಪೋಲಿಸ್ ಇಲಾಖೆ:

12ನೇ ಮುಖ್ಯರಸ್ತೆ. ಗೋಕುಲ. ಹೆಚ್ಎಂಟಿ ಬಡಾವಣೆ ಇಲ್ಲಿ ಸಾರ್ವಜನಿಕರು ವಾಹನಗಳನ್ನು ಎಲ್ಲೆಂದರಲ್ಲಿ ಪಾರ್ಕ್ ಮಾಡುತ್ತಿರುವುದರಿಂದ. ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು. ಹಾಗೂ ಸ್ಥಳೀಯ ಯುವಕರು ವಾಹನಗಳ ಹಿಂದೆ ಹಾಗೂ ಆಟದ ಮೈದಾನದಲ್ಲಿ ಕಾನೂನು ಬಾಹಿರ ಚಟುವಟಿಕೆಗಳಾದ ಗಾಂಜಾ. ಅಫೀಮು. ಮಾದಕ ವಸ್ತುಗಳ ಸೇವನೆ ಮಾಡಿ. ರಸ್ತೆಯಲ್ಲಿ ಓಡಾಡುವ ಹಿರಿಯ ನಾಗರೀಕರು ಹಾಗೂ ಮಹಿಳೆಯರು ಮತ್ತು ಮಕ್ಕಳಿಗೆ ತೊಂದರೆ ಮಾಡುತ್ತಿರುತ್ತಾರೆ ಎಂದು ಸಾರ್ವಜನಿಕರು ದೂರು ನೀಡಿದ್ದು. ಇಂತಹ ಸಾಮಾಜಿಕ ಪಿಡುಗಿನ ಬಗ್ಗೆ ಸಂಬಂಧಪಟ್ಟ ಪೋಲಿಸ್ ಇಲಾಖೆಯು ಈ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಬೇಕೆಂದು ನಿರ್ದೇಶಿಸಿರುತ್ತಾರೆ.

ಮುಂದುವರೆದು. ಗುರುದರ್ಶನ ಸ್ವೀಟ್ಸ್. ಮತ್ತಿಕೆರೆ ಮುಖ್ಯರಸ್ತೆ ಮುಂಭಾಗದ ಆಟೋ ರಿಕ್ಷಾ ನಿಲ್ದಾಣದಲ್ಲಿ ಆಟೋ ಚಾಲಕರು ಆಟೋಗಳನ್ನು ವ್ಯವಸ್ಥಿತವಾಗಿ ಆಟೋಗಳನ್ನು ನಿಲ್ಲಿಸದೇ ಇರುವುದರಿಂದ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ತೊಂದರೆಯಾಗುತ್ತಿರುತ್ತದೆ. ಇದರ ಬಗ್ಗೆ ಕ್ರಮವಹಿಸಲು ಪೋಲಿಸ್ ಇಲಾಖೆಗೆ ಸೂಚಿಸಿರುತ್ತಾರೆ.

Scanned with CamScanner

5. ಬಿಬಿಎಂಪಿ ಟಿ.ಇ.ಸಿ. ವಿಭಾಗ:

12ನೇ ಮುಖ್ಯರಸ್ತೆ, ಗೋಕುಲ ಇಲ್ಲಿ ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಇದ್ದು, ಶಾಲಾ ವಲಯವಾಗಿರುವುದರಿಂದ, ವಾಹನಗಳ ವೇಗ ನಿಯಂತ್ರಿಸಲು ರಸ್ತೆ ಉಬ್ಬುಗಳನ್ನು ನಿರ್ಮಿಸಿಕೊಡುವಂತೆ ಸಾರ್ವಜನಿಕರು ಕೋರಲಾಗಿದ್ದು, ಇದರ ಬಗ್ಗೆ ಅಧ್ಯಕ್ಷರು ಮಾತನಾಡಿ, ಸಂಬಂಧಪಟ್ಟ ಬಿಬಿಎಂಪಿಯ ಟಿ.ಇ.ಸಿ. ವಿಭಾಗರವರೊಂದಿಗೆ ಚರ್ಚಿಸಿ, ಕ್ರಮ ವಹಿಸಲು ಸೂಚಿಸಲಾಗುವುದೆಂದು ಸಭೆಗೆ ತಿಳಿಸಿದರು.

6) ಕಾಮಗಾರಿ ಇಲಾಖೆ:-

12ನೇ ಮುಖ್ಯರಸ್ತೆ, ಗೋಕುಲ ಇಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ ಗಣೇಶ ಗುಡಿ ಆಟದ ಮೈದಾನದ ಹಿಂಭಾಗ ಕಾಂಪೌಂಡ್ ಕುಸಿದಿದ್ದು, ಇದನ್ನು ದುರಸ್ತಿಗೊಳಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ. ಇದರ ಬಗ್ಗೆ ಪಾಲಿಕೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಸಭೆಗೆ ತಿಳಿಸಿದರು.

ಮುಂದುವರೆದು, ಇದೇ ರಸ್ತೆಯಲ್ಲಿ ಖಾಲಿ ಜಾಗವಿದ್ದು, ಸಾರ್ವಜನಿಕರು ಕಸ ಸುರಿಯುತ್ತಿದ್ದು, ಪದೇ ಪದೇ ತೆರವುಗೊಳಿಸುತ್ತಿದಾಗ್ಯೂ ನಿರಂತರವಾಗಿ ರಾತ್ರಿ ವೇಳೆಯಲ್ಲಿ ಕಸ ಸುರಿಯುತ್ತಿರುತ್ತಾರೆ. ಆದ್ದರಿಂದ ಸದರಿ ಸ್ಥಳವನ್ನು ಜೆಸಿಬಿ ಮುಖಾಂತರ ಸ್ವಚ್ಛಗೊಳಿಸಿ, ಕಸ ಸುರಿಯದಿರುವಂತೆ ಸೂಚನಾ ಫಲಕವನ್ನು ಅಳವಡಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಿದರು.

7) ಪೌರ ಕಾರ್ಮಿಕರ ಬಗ್ಗೆ:-

ಪೌರ ಕಾರ್ಮಿಕರಿಗೆ ಹಾಗೂ ಆಟೋ ಟಿಪ್ಪರ್ ಚಾಲಕರಿಗೆ ಪಿಪಿಇ ಕಿಟ್‌ನ್ನು 10 ದಿನಗಳೊಳಗಾಗಿ ಒದಗಿಸಲು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರಿಗೆ ಅಧ್ಯಕ್ಷರು ಸೂಚಿಸಿರುತ್ತರೆ.

8) ಮಾಸ್ಕ್ ಹಾಕದಿರುವ ವ್ಯಕ್ತಿಗಳಿಗೆ ದಂಡ ವಿಧಿಸುವ ಬಗ್ಗೆ:-

ಪ್ರಸ್ತಾಪಿತ ವಿಷಯದ ಬಗ್ಗೆ ಮಾರ್ಷಲ್‌ಗಳೊಂದಿಗೆ ಚರ್ಚಿಸಲಾಗಿದ್ದು, ಕೋವಿಡ್ ನಿಯಂತ್ರಣ ಸಂಬಂಧ ಮಾಸ್ಕ್ ಹಾಕದಿರುವ ಸಾರ್ವಜನಿಕರಿಗೆ ಸರ್ಕಾರದ ಆದೇಶದ ರೀತ್ಯಾ ದಂಡ ವಿಧಿಸಲು ಸೂಚಿಸಲಾಯಿತು.

Scanned with CamScanner

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

8/12/2020
(ಅಜಗಣ್ಣಯ್ಯ ಸ್ವಾಮಿ)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:17

8/12/2020
(ಎ. ಬಿ. ದೊಡ್ಡಯ್ಯ)
ಮುಖ್ಯ ಅಭಿಯಂತರರು ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:17

Scanned with CamScanner